ಅವಳನ್ನು ಡೌನ್ ಟೌನ್ ಬ್ರಾಂಚಿಗೆ ಹಾಕಿದ್ದಾರೆ. ಟೌನ್ ತುಂಬಾ ದಟ್ಟಣೆ. ರಿಕ್ಷಾದಲ್ಲಿ ಹೋದರೆ ಖರ್ಚು ಜಾಸ್ತಿ. ಹಾಗಾಗಿ ಮೊಪೆಡ್ ಕೊಂಡುಕೊಂಡಳು. ಅದು ಕೊಂಡಾಗ ಅವಳ ವಯಸ್ಸು ನಲವತ್ತೈದು. ವಾಹನ ದಟ್ಟಣೆಯಿರುವ, ಕ್ರಮವಿಲ್ಲದ ಟ್ರಾಫಿಕ್ಕಿನಲ್ಲಿ ಮೊಪೆಡ್ ನಡೆಸುವುದು ಕಷ್ಟ ಅನಿಸಿ ಮುಕ್ಕಾಲು ಗಂಟೆಯ ಮೊದಲೇ ಹೊರಡುತ್ತಾಳೆ. ಅಂಥದರಲ್ಲಿ ಇವತ್ತು ಗಂಟೆ ಒಂಭತ್ತಾದರೂ ತಲೆತುಂಬಾ ಹೊದ್ದು ಮಲಗಿದ್ದಾಳೆ ಅಂದರೆ –ಮೈ ಹುಷಾರಿಲ್ಲವಾ! ಇತ್ತೀಚೆಗೆ ಅವಳು ಕಾಯಿಲೆ ಬಿದ್ದ ಹಾಗೆ



ಸೂರ್ಯಾರಾವನಿಗೆ ಕಂಡಿರಲಿಲ್ಲ.

ಸೂರ್ಯಾರಾವು ಆಕೆ ಹೊದ್ದಿದ್ದ ದುಪ್ಪಟಿಯನ್ನು ಎಳೆದು ಹಾಕಿದ. ಅವಳನ್ನು ನೋಡುತ್ತಲೇ ಅವನ ಕಣ್ಣು ದೊಡ್ಡವಾದವು. ಬಾಯಿಗೆ ಕೈ ಒತ್ತಿಕೊಂಡು ಕುಸಿದು ಗೋಡೆಗೆ ಒರಗಿ ನಿಂತುಬಿಟ್ಟ. ಅನೂರಾಧೆಯ ದೇಹವೆಲ್ಲಾ ಬೆಳ್ಳಗೆ ಸುಣ್ಣ ಮೆತ್ತಿದ ಹಾಗಿತ್ತು. ಕಣ್ಣು ತೆರೆದೇ ಇದ್ದವು. ಉಟ್ಟ ಸೀರೆ ಉಟ್ಟ ಹಾಗೇ ಇತ್ತು. ಆದರೆ ಕೈ ಕಾಲು ಸುಣ್ಣದಿಂದ ಮಾಡಿದ ಹಾಗಿದ್ದವು. ಕಣ್ಣು, ಕೂದಲು ಬಿಟ್ಟರೆ ಇಡೀ ದೇಹ ಹಾಗೇ ಇತ್ತು. ಕಣ್ಣು ನಿರ್ಮಲವಾಗಿ ಹೊಳೆಯುತ್ತಿದ್ದವು.

ರಾತ್ರಿ ಹನ್ನೆರಡರವರೆಗೆ ಚೆನ್ನಾಗಿಯೇ ಇದ್ದಳು. ವರ್ಷದಿಂದ ತಪ್ಪದೇ ನೋಡುತ್ತಿದ್ದ ಹಿಂದಿ ಸೀರಿಯಲ್ ಕೂಡಾ ನೋಡಿದಳು. ಈ ಹೊತ್ತಿನ ತಿಂಡಿಗೆ ಇಡ್ಲಿ ಹಿಟ್ಟು ರುಬ್ಬಿದಳು. ನೀರು ಕಾಯಿಸಿ ಫಿಲ್ಟರಿನಲ್ಲಿ ಹಾಕಿದಳು. ಒಂದೇನು, ಸಾವಿರ ಕೆಲಸ ಮಾಡಿದಳು. ಅವಳಿಗೆ ದೂರದೃಷ್ಟಿ ಹೆಚ್ಚು. ಇವತ್ತಿಗಾಗಿ ನಿನ್ನೆಯೇ ಎಲ್ಲಾ ಸಿದ್ಧ ಮಾಡಿದಳು. ಈಗ ನೋಡಿದರೆ ಹೀಗೆ ಸುಣ್ಣದ ಬೊಂಬೆಯ ಹಾಗೆ ಬದಲಾಗಿದ್ದಾಳೆ. ಈ ಥರದ ಕಾಯಿಲೆ ಈ ಮುಂಚೆ ಸೂರ್ಯಾರಾವು ಎಲ್ಲೂ ಕಂಡಿರಲಿಲ್ಲ. ಮೂಗಿನ ಹತ್ತಿರ ಬೆರಳಿಟ್ಟು ನೋಡಿದ. ಉಸಿರು ನಿಂತು ಹೋಗಿತ್ತು. ಎದೆಯ ಮೇಲೆ ಕಿವಿ ಆನಿಸಿ ನೋಡಿದ. ಎದೆಯ ಸದ್ದೂ ಇಲ್ಲ. ಬೆಚ್ಚಿ ಬಿದ್ದ. ಅನೂರಾಧ ಸತ್ತು ಹೋದಳಾ! ಅನೂರಾಧ ಸಾಯುವುದಾ? ಸೂರ್ಯಾರಾವು ಬೆವತು ಹೋದ. ನಿಧಾನಕ್ಕೆ ಹೆಜ್ಜೆ ಹಾಕುತ್ತಾ ಹೋಗಿ ಗೆಳೆಯ ಸುಬ್ಬಾರಾವನಿಗೆ ಫೋನು ಮಾಡಿ ಡಾಕ್ಟರನ್ನು ಕರೆದುಕೊಂಡು ಬರಲು ಹೇಳಿದ. ಅನೂರಾಧಾಳ ಕಾಯಿಲೆ ಯಾವುದೆಂದು ಡಾಕ್ಟರಿಗೆ ಪತ್ತೆಹಚ್ಚಲು ಆಗಿಲ್ಲವಾದರೂ ಅವಳು ಸತ್ತು ಹೋಗಿರುವುದನ್ನು ಮಾತ್ರ ಖಾತರಿ ಮಾಡಿದ. ನಿಮಿಷದಲ್ಲಿ ಅನೂರಾಧಾಳ ಸಾವಿನ ಸುದ್ದಿ ಆ ಬೀದಿಯ ಮನೆಮನೆಗೂ ಹರಡಿತು. ಅಕ್ಕಪಕ್ಕದ ಮನೆಯ ಮಂದಿ ಗಡಿಬಿಡಿಯಿಂದ ಕಾಫಿ ಮಾಡಿ ಕುಡಿದು, ಬಾಟಲಿಯಲ್ಲಿ ನೀರು ಗೀರು ತುಂಬಿಕೊಂಡು ಸೂರ್ಯಾರಾವನ ಮನೆಗೆ ಬಂದರು.

ಹೆಣವನ್ನು ನೆಲದ ಮೇಲೆ ಹಾಕಿ ತಲೆಯ ಹತ್ತಿರ ದೀಪ ಇಡಬೇಕೆಂದು ಪಕ್ಕದ ಮನೆಯ ಅಜ್ಜಿ ಅಂದಳು.

ನಡುಮನೆಯಲ್ಲಿ ಚಾಪೆ ಹಾಸಿ ಅದರ ಮೇಲೆ ಹೆಣ ಮಲಗಿಸಿದರು. 'ಮಕ್ಕಳಿಗೆ ಫೋನು ಮಾಡು ಸೂರ್ಯಾರಾವ್ ಎಂದು ಗೆಳೆಯ ಸುಬ್ಬಾರಾವ್ ಹೇಳಿದ. ಸೂರ್ಯಾರಾವು ಪದೇ ಪದೇ ಎಸ್.ಟಿ.ಡಿ ಕಾಲ್ ಮಾಡುತ್ತಿರುವನೆಂದು ಆ ಫೆಸಿಲಿಟಿಯನ್ನು ಅನೂರಾಧ ತೆಗೆಸಿಬಿಟ್ಟಿದ್ದಳು. ಮಕ್ಕಳ ಫೋನ್ ನಂಬರ್ ಮತ್ತು ಹಣವನ್ನು ಸುಬ್ಬಾರಾವನಿಗೆ ಕೊಟ್ಟು ಕಳಿಸಿದ. ಸೂರ್ಯಾರಾವು ಇನ್ನೂ ಮುಖ ತೊಳೆದಿಲ್ಲ. ನಿದ್ದೆಯಿಂದ ಏಳುತ್ತಲೇ ಆತ ಮುಖ ತೊಳೆದು ಬರುವ ಹೊತ್ತಿಗೆ ಕಪ್ಪಿನಲ್ಲಿ ಬಿಸಿ ಬಿಸಿ ಕಾಫಿ ತಯಾರಾಗಿರುತ್ತಿತ್ತು. ಎರಡು ಕಪ್ಪು ಕಾಫಿಗೆ ಎಷ್ಟು ಕಾಫಿ ಪುಡಿ ಬೇಕು, ಎಷ್ಟು ಹಾಲು ಹಾಕಬೇಕು, ಯಾವ ಹದಕ್ಕೆ ಬಿಸಿ ಮಾಡಬೇಕು ಎನ್ನುವುದು ಅನೂರಾಧಾಗೆ ಗೊತ್ತಿರುವ ಹಾಗೆ ಯಾರಿಗೂ ಗೊತ್ತಿರಲಿಕ್ಕಿಲ್ಲ.